
**ಗ್ರಾಹಕಿ:** ವ್ಹಾವ್, ಫೇಷಿಯಲ್, ಕ್ಲೀನ್ ಅಪ್ ಚೆನ್ನಾಗಿ ಮಾಡಿರುವೆ. ಎಷ್ಟು ವರ್ಷಗಳ ಅನುಭವವಿದೆ ನಿನಗೆ?
**ಬ್ಯೂಟಿ ಪಾರ್ಲರ್ ಕೆಲಸದಾಕೆ:** ಬ್ಯೂಟಿ ಪಾರ್ಲರ್‌ನಲ್ಲಿ ಇವತ್ತು ಮೊದಲನೇ ದಿವಸ ಮೇಡಂ... ನಿನ್ನೆಯ ತನಕ ನಾನು ಪಕ್ಕದ ವಠಾರದಲ್ಲಿ ಪಾತ್ರೆ ತೊಳೆಯುವ ಕೆಲಸ ಮಾಡುತ್ತಿದ್ದೆ!




**ಹರೀಶ:** ಮಕ್ಕಳನ್ನು ನಿನ್ನಪ್ಪ ಅಮ್ಮನ ಮನೆಯಲ್ಲಿ ಬಿಟ್ಟು ನಾವು ನಮ್ಮ ಎರಡನೇ ಹನಿಮೂನಿಗಾಗಿ ಊಟಿಗೆ ಹೋಗೋಣವೆ ಡಾರ್ಲಿಂಗ್?
**ಶರ್ಮಿಳಾ:** ಅದು ಸಾಧ್ಯವಿಲ್ಲ ಕಣ್ರೀ... ನನ್ನಪ್ಪ ಅಮ್ಮ ತಮ್ಮ ಮೂರನೇ ಹನಿಮೂನಿಗೆಂದು ಇಪ್ಪತ್ತು ದಿನದವರೆಗೆ ಕಾಶ್ಮೀರದ ಕಡೆಗೆ ಹೋಗುತ್ತಿದ್ದಾರೆ.

ಮದಿರಾಪ್ರಿಯ ಗುಂಡನ ಅನುಭವದ ಪ್ರಕಾರ...
**ಹೆಂಡತಿ:** ಹೀಗೆ ದಿನವೂ ಶರಾಬು ಕುಡಿಯುವುದರಿಂದ ಏನು ಸಿಗುತ್ತದೆ ನಿಮಗೆ?
**ಗುಂಡ:** ನಿರರ್ಗಳವಾಗಿ ಇಂಗ್ಲಿಷ್ ಮಾತಾಡಲು ಸಾಧ್ಯವಾಗುತ್ತದೆ. ಲೀಲಾಜಾಲವಾಗಿ ಡ್ಯಾನ್ಸ್ ಮಾಡಲು ಶಕ್ಯವಾಗುತ್ತದೆ. ಸ್ನೇಹಿತರ ನಡುವೆ ಗೆಳೆತನ ಆಳವಾಗುತ್ತದೆ. ಎಲ್ಲದಕ್ಕಿಂತ ಮಿಗಿಲಾಗಿ ಹೆಂಡತಿಯ ಜೊತೆ ಕಣ್ಣಲ್ಲಿ ಕಣ್ಣಿಟ್ಟು ಮಾತನಾಡುವ ಧೈರ್ಯ ಉಗಮಿಸುತ್ತದೆ.

**ಮಗ:** ನನಗೊಂದು ಸಂದೇಹವಿದೆ.
**ಅಪ್ಪ:** ಏನದು?
**ಮಗ:** ತ್ರೇತಾಯುಗದಲ್ಲಿ ಶ್ರೀ ರಾಮನು ತನ್ನ ಅಪ್ಪನ ಮಾತನ್ನು ಆಲಿಸಿ ದೇವರ ಸ್ಥಾನಕ್ಕೇರಿದನೆಂದು ನಾನು ಕಲಿತಿದ್ದೇನೆ.
**ಅಪ್ಪ:** ನೀನು ಕಲಿತಿರುವುದು ನಿಜ.
**ಮಗ:** ಆದರೆ ಸತ್ಯಯುಗದಲ್ಲಿ ಪ್ರಹ್ಲಾದನು ತನ್ನ ಅಪ್ಪನ ಮಾತನ್ನು ಕೇಳದೆಯೇ ಶ್ರೇಷ್ಠ ಸ್ಥಾನಕ್ಕೇರಿದ್ದಾನೆ ತಾನೆ?
**ಅಪ್ಪ:** ಅದೂ ನಿಜವೇ.
**ಮಗ:** ಹಾಗಾದರೆ ನಾನು ನಿಮ್ಮ ಮಾತನ್ನು ಆಲಿಸಬೇಕೇ, ಬೇಡವೇ ಎಂಬುದನ್ನು ತಿಳಿಸಿ ನನಗೂ ಜ್ಞಾನೋದಯ ಕರುಣಿಸಿ.
**ಅಪ್ಪ:** ನಾವೀಗ ಕಲಿಯುಗದಲ್ಲಿದ್ದೇವೆ ಮಗನೇ. ಈ ಯುಗದಲ್ಲಿ ಶಾಂತಿಯುತ ಹಾಗೂ ಅನ್ಯೋನ್ಯ ಜೀವನಕ್ಕಾಗಿ ನಾವಿಬ್ಬರೂ ನಿನ್ನಮ್ಮನ ಮಾತನ್ನು ಆಲಿಸುವುದೇ ನಿಜವಾದ ಜ್ಞಾನ.

**ಪತಿ:** ನೀನು ನನ್ನನ್ನು ನಾಯಿಯೆಂದು ಕರೆದೆಯಾ?
ಪತ್ನಿ ಸುಮ್ಮನಿದ್ದಳು....
**ಪತಿ:** ಹೇಳು, ನೀನು ನನಗೆ ನಾಯಿಯೆಂದೆಯಾ?
**ಪತ್ನಿ:** ಇಲ್ಲ ಮಾರಾಯರೇ, ಈಗಲಾದರೂ ಬೊಗಳುವುದನ್ನು ಮೊದಲು ನಿಲ್ಲಿಸಿ.

**ಭಾವಿ ಅಳಿಯ:** ನಾನು ನಿಮ್ಮ ಮಗಳನ್ನು ಹತ್ತು ವರ್ಷಗಳಿಂದ ಪ್ರೀತಿಸುತ್ತಿದ್ದೇನೆ.
**ಭಾವಿ ಮಾವ:** ಈಗೇನು? ನಿನಗೆ ಪೆನ್ಷನ್ ಆರಂಭಿಸಲೆ?

**ಪತಿ:** ನಿನ್ನನ್ನು ಮದುವೆಯಾಗಿ ನಾನು ನಿಜಕ್ಕೂ ಹುಚ್ಚನಾಗಿದ್ದೇನೆ.
**ಪತ್ನಿ:** ಅದೇನೋ ಸರಿ, ಆ ಹುಚ್ಚುತನದಲ್ಲೇ ಎರಡು ಮಕ್ಕಳಾಗಿವೆಯಲ್ಲಾ... ಅದಕ್ಕೇನು ಹೇಳುತ್ತೀರಿ? ಮಾಡಿದ್ದುಣ್ಣೋ ಮಾರಾಯ ಅಂತ ಸುಮ್ಮಿರಬೇಕು.

ಹೃದಯಾಂತರಾಳದಿಂದ ಕಣ್ಣು ಮುಚ್ಚಿ ನೆನೆಸಿಕೊಂಡರೆ ನಾವು ಜೀವನದಲ್ಲಿ ಪ್ರೀತಿಸಿದವರ ಮುಖ ಗೋಚರಿಸುವುದಂತೆ. ಕಾಲೇಜು ಹುಡುಗ ಗುಂಡ ಹಾಗೆ ಮಾಡಿದ್ದೇ ತಡ, ಹುಡುಗಿಯರ ಮುಖಗಳ ಸ್ಲೈಡ್ ಶೋನೇ ಆರಂಭವಾಯಿತು.

**ಡಾಕ್ಟರ್:** ನ್ಯುಮೋನಿಯಾ ಆಗಿತ್ತೆ?
**ರೋಗಿ ಗುಂಡ:** ಹೌದು.
**ಡಾಕ್ಟರ್:** ಯಾವಾಗ?
**ಗುಂಡ:** ಶಾಲೆಯಲ್ಲಿ ಇಂಗ್ಲಿಷ್ ಟೀಚರ್ ಅದರ ಸ್ಪೆಲ್ಲಿಂಗ್ ಕೇಳಿದಾಗ.




**ಕುಮಾರಿ ಗೀತಾ:** ಒಳ್ಳೆಯ ವರ ಸಿಗಲಿ ಎಂದು ಪ್ರಾರ್ಥನೆ ಮಾಡಲು ನಾವು ದೇವಸ್ಥಾನಕ್ಕೆ ಹೋಗುತ್ತಿದ್ದೇವೆ. ಆದರೆ ಈಗಾಗಲೇ ಮದುವೆ ಆಗಿರುವ ವಿವಾಹಿತ ಮಹಿಳೆಯರೇಕೆ ಹೋಗುತ್ತಿದ್ದಾರೆ?
**ಕುಮಾರಿ ಅನಿತಾ:** 'ನಾನು ಕೇಳಿದ್ದೇನು, ನೀನು ಕೊಟ್ಟಿದ್ದೇನು' ಅಂತ ದೇವರನ್ನು ಕೇಳೋಕೆ ಹೋಗುತ್ತಿದ್ದಾರೆ ಕಣೆ.

ಇತ್ತೀಚಿನ ಸಂಶೋಧನೆಗಳ ಪ್ರಕಾರ, ಹುಡುಗರು ಯಾವತ್ತೂ ತಮ್ಮ ಗರ್ಲ್‌ಫ್ರೆಂಡ್‌ಗೆ ವಿಧೇಯರಾಗಿರುತ್ತಾರೆ. ಆದರೆ ಯಾವ ಗರ್ಲ್‌ಫ್ರೆಂಡ್‌ಗೆ ಎನ್ನುವ ಪ್ರಶ್ನೆ ಮಾತ್ರ ಇನ್ನೂ ಸಂಶೋಧನೆಯ ವಿಷಯವಾಗಿಯೇ ಉಳಿದಿದೆ.

**ಹುಡುಗ:** ನನ್ನ ತಂದೆ ತಾಯಿಗೆ ಎಲ್ಲರನ್ನೂ ಪ್ರೀತಿಸುವ ಹುಡುಗಿ ಬೇಕಂತೆ.
**ಹುಡುಗಿ:** ನೀವು ಅದರ ಬಗ್ಗೆ ಚಿಂತಿಸಬೇಕಾಗಿಲ್ಲ. ಕಾಲೇಜಲ್ಲಿರುವಾಗ ಪ್ರೇಮ ಪ್ರಕರಣಗಳಲ್ಲಿ ನನ್ನದೇ ಎತ್ತಿದ ಕೈ ಆಗಿತ್ತು.

ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ, ಮುಂಬೈ